2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.191/2025

ಪಿ.ಡಬ್ಲ್ಯೂ: 12

ಸಿ.ಡಬ್ಲ್ಯೂ: 6

ಸಾಕ್ಷಿಯ ಹೆಸರುಃ ಶ್ರೀ. ವಿನಾಯಕ ಯಲ್ಲಪ್ಪ ಕುರ್ತುಕೊಟಿ

ತಂದೆಯ ಹೆಸರುಃ ಯಲ್ಲಪ್ಪ ಕುರ್ತುಕೊಟಿ

ವಯಸ್ಸುಃ 27 ವರ್ಷ

ಉದ್ಯೋಗಃ ಕೂಲಿ

ವಾಸಃ ಗಾಂಧಿನಗರ ಖಾನಾಪುರ

**ದಿನಾಂಕಃ 04.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1.ದಿಃ 10.12.2025 ರಂದು ಬೆಳಿಗ್ಗೆ 10.00 ಗಂಟೆ ನನ್ನನ್ನು ಹಾಗೂ ಮತ್ತೊಬ್ಬನನ್ನು ಪೋಲಿಸ ಠಾಣೆಗೆ ಕರೆಸಿದ್ದರು, ಅಲ್ಲಿ ಮೃತನ ಬಟ್ಟೆಗಳು, ರಕ್ತದ ಮಾದರಿ ಹಾಗೂ ಮೃತನ ದೇಹದ ಅಂಗಾಂಗಳನ್ನು ಸಂಗ್ರಹಿಸಿದ ಒಟ್ಟು 8 ಪ್ಯಾಕೇಟಗಳು ಶೀಲ ಮಾಡಿ ಪ್ಯಾಕ ಮಾಡಿದ್ದವು, ಅವುಗಳನ್ನು ಮೃತನ ಶವ ಪರೀಕ್ಷಾ ಕಾಲಕ್ಕೆ ಆಸ್ಪತ್ರೆಯಲ್ಲಿ ಸಂಗ್ರಹಿಸಿ ಕೊಟ್ಟಿದ್ದರಂತೆ. ಅವುಗಳನ್ನು ನಮ್ಮ ಸಮಕ್ಷಮ ಪಡೆದುಕೊಂಡ ಬಗ್ಗೆ ದಾಖಲೆ ತಯಾರಿಸಿ ನಮ್ಮ ಸಹಿ ಪಡಿೆದುಕೊಡಂಡಿರುತ್ತಾರೆ ಹಾಗೂ ಆ ಕಾಲಕ್ಕೆ ಪೊಟೊವನ್ನು ತೆಗೆದಿರುತ್ತಾರೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿ.ಪಿ.24 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು. ಪೊಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.25 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.25 ರಲ್ಲಿ ಕಾಣುವ ಪ್ಯಾಕೇಟಗಳನ್ನೆ ಆ ಕಾಲಕ್ಕೆ ಠಾಣೆಯಲ್ಲಿ ನೋಡಿದ್ದು ಎಂದು ಗುರುತಿಸುತ್ತಾರೆ.

2. ಅದೇ ದಿನ ಈ ಪ್ರಕರಣದ ಗಾಯಾಳು ಸಾಗರ ಅಸ್ಟೇಕರನ ರಕ್ತದ ಮಾದರಿಯನ್ನು ಸರ್ಕಾರಿ ದವಾಖಾನೆ ಖಾನಾಪುರದಲ್ಲಿ ಸಂಗ್ರಹಿಸಿ ಪ್ಯಾಕ ಮಾಡಿ ಶೀಲ ಮಾಡಿ ಕಳುಹಿಸಿ

ಕೊಟ್ಟಿದ್ದರು, ಅದನ್ನು ಸಹ ನಮ್ಮ ಸಮಕ್ಷಮ ಪಂಚನಾಮೆ ಬರೆದು ಪೋಟೊ ತೆಗೆದು ಜಪ್ತು ಮಾಡಿದರು ಎಂದು ಹೇಳುತ್ತಾರೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ನಿ.ಪಿ.26 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.26(ಎ) ಹಾಗೂ ಪೋಟೊವನ್ನು ನಿ.ಪಿ.27 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

ಆರೋಪಿತ ಪರ ವಕೀಲರು ಗೈರು ಹಾಜರು ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ 3 ಹಾಗೂ ದೃಶ್ಯ ಮಾಧ್ಯಮದ ಮೂಲಕ ಹಾಜರಾಗಿರುವ ಆರೋಪಿ 1 ಮತ್ತು 2 ರವರು ಹಾಲಿ ಇರುವ ವಕೀಲರು ಈ ಪ್ರಕರಣವನ್ನು ನಡೆಸುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಆದ್ದರಿಂದ ಈ ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.

ಸಮಯ ಕೋರಲು ಆರೋಪಿತರು ಸರಿಯಾದ ಕಾರಣವನ್ನು ನೀಡದಿದ್ದರೂ ಸಹಿತ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಈ ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅವಕಾಶ ನೀಡಬೇಕೆಂಬ ಉದ್ದೇಶದಿಂದ ರೂ. 1000/- ದಂಡ ವಿಧಿಸಿ ಪಾಟೀ ಸವಾಲಿಗೆ ಸಮಯ ನೀಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

sd/-

(ಗಂಗಾಧರ ಕೆ.ಎನ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.

**ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಸ್.ಎನ್.ಹೆಚ್., ವಕೀಲರಿಂದಃ**

3. ಮೃತ ಹಾಗೂ ನಾನು ಪರಿಚಯಸ್ಥರು, ಆದರೆ ಸ್ನೇಹಿತರಲ್ಲ. ಪಂಚನಾಮೆಗೆ ಬನ್ನಿ ಎಂದು ಪೋಲಿಸರು ನನಗೇನು ಲಿಖಿತ ನೋಟಿಸ ನೀಡಿರುವುದಿಲ್ಲ. ಪಂಚನಾಮೆಯ ವಿವರವನ್ನು ನಾನೇನು ಹೇಳಿ ಬರೆಸಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನಾನೇನು ಓದಿ ತಿಳಿದುಕೊಂಡಿರುವುದಿಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪೋಲಿಸರು ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎನ್ನುವುದು ಸರಿ. ಪೋಲಿಸರು ಅಲ್ಲಿ ನಿಂತುಕೋ ಎಂದು ಹೇಳಿದ್ದರಿಂದ ನಿಂತುಕೊಂಡಿದ್ದೆ ಆ ಕಾಲಕ್ಕೆ ಫೋಟೋ ತೆಗೆದಿದ್ದಾರೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

sd/-

(ಗಂಗಾಧರ ಕೆ.ಎನ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.